# ಸಕಲೇಶಪುರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

ಸಿ ಸಿ ಸಂಖ್ಯೆ೧೨೧೫-೨೦೨೪ಃ

ಫಿರ್ಯಾದುದಾರರು ಃ ರಾಜ್ಯದ ಪರವಾಗಿ

ನಗರ ಪೊಲೀಸ್ ಠಾಣೆ

-ವಿರುದ್ದ-

ಆರೋಪಿತರು ಃ ವಿಲ್ಸನ್ ಮತ್ತು ಇತರೆ 4 ಜನರು

**:ದೋಷಾರೋಪಣೆ :**

ನಾನು ಶ್ರೀ ಜಯಪ್ರಕಾಶ್.ವಿ. ಬಿ.ಎ., ಎಲ್. ಎಲ್. ಬಿ., ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ನಾನು ಆರೋಪಿತರಾದಃ

ಆ.1 ವಿಲ್ಸನ್ ಬಿನ್ ವಿಲ್ಲಿಯಮಜ್ ಜಾನ್
ವಯ್ಯಸ್ಸು 38 ವರ್ಷ, ಕ್ರಿಶ್ಚಯನ್
ಬಣ್ಣ ಬಳಿಯುವ ಕೆಲಸ ವಾಸ
ಬಾಗೆ ಗ್ರಾಮ , ಬೆಳಗೋಡು
ಹೋಬಳಿ , ಸಕಲೇಶಪುರ
ತಾಲ್ಲೂಕು

ಆ.2 ಕೊಮಲೇಶ್ ಬನ್ ನಾರಾಯಣ
ವಯ್ಯಸ್ಸು 35 ವರ್ಷ, ಹಿಂದು
ಬಣ್ಣ ಬಳಿಯುವ ಕೆಲಸ ವಾಸ
ಬಾಗೆ ಗ್ರಾಮ , ಬೆಳಗೋಡು
ಹೋಬಳಿ , ಸಕಲೇಶಪುರ
ತಾಲ್ಲೂಕು

ಆ.3 ರಿತೇಶ್ ಉಃ ರುತೇಶ್ ,
ವಯ್ಯಸ್ಸು 38 ವರ್ಷ
ಬಿನ್ ಹಾಲಪ್ಪ
ಹಿಂದು

ಬಣ್ಣ ಬಳಿಯುವ ಕೆಲಸ ವಾಸ
ಬಾಗೆ ಗ್ರಾಮ , ಬೆಳಗೋಡು
ಹೋಬಳಿ , ಸಕಲೇಶಪುರ
ತಾಲ್ಲೂಕು

ಆ.4 ಆನಂದ ಬಿನ್ ಅಂಬೊಡಿ,
ವಯ್ಯಸ್ಸು 38 ವರ್ಷ,
ಹಿಂದು, ಕೂಲಿ ಕೆಲಸ
ವಾಸ ಬಾಗೆ ಗ್ರಾಮ , ಬೆಳಗೋಡು
ಹೋಬಳಿ , ಸಕಲೇಶಪುರ
ತಾಲ್ಲೂಕು

ಆ.5 ಅಭಿ ಉಃ ಅಭಿಷೇಖ್
ಬಿನ್ ರವಿ , ವಯ್ಯಸ್ಸು
20 ವರ್ಷ, ಚಾಲಕ
ವಾಸ ಕಾಕನಮ್ಮನ ಗ್ರಾಮ
ಬೆಳಗೋಡು ಹೋಬಳಿ,
ಸಕಲೇಶಪುರ ತಾಲ್ಲೂಕು

ನಿಮಗೆ ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆಃ

1. ದಿನಾಂಕಃ09-09-2024 ರಂದು ರಾತ್ರಿ ಸುಮಾರು 10-00 ಗಂಟೆಯ ಸಮಯದಲ್ಲಿ ಚಾ ಸಾ 1 ಮಧುಕುಮಾರ್ ರವರು ತಮ್ಮ ಬಾಬ್ತು ಕಾಫಿ ತೋಟದಿಂದ ಬಾಗೆ ಗ್ರಾಮದ ತಮ್ಮ ಮನೆಗೆ ಬರಲೆಂದು ತಮ್ಮ ಕಾರನ್ನು ಚಾಲನೆ ಮಾಡಿಕೊಂಡು ಬಾಗೆ ಗ್ರಾಮದ ವೃತ್ತದ ಬಳಿ ಇರುವ ವಿ ಬಿ ಬೇಕರಿ ಮತ್ತು ಇಸ್ಮಾಯಿಲ್ ರವರ ಹೋಟೆಲ್ ನಡುವೆ ಬಾಗೆ -ಬೆಳಗೋಡು ರಸ್ತೆಯಲ್ಲಿ ಬಂದಾಗ ಗಣಪತಿಯ ಮೂರ್ತಿ ವಿಸರ್ಜನೆ ಮುಗಿಸಿ ವಾಪಸ್ ಬರುತ್ತಿದ್ದ ಮೇಲ್ಕಂಡ ಆರೋಪಿಗಳಾದ ನೀವುಗಳು ಚಾ ಸಾ 1 ರವರ ಕಾರಿಗೆ ಅಡ್ಡ ಬಂದು ಕಾರು ಮುಂದೆ ಚಲಿಸದಂತೆ ತಡೆದು , ಆ ನಿಮಿತ್ತದಿಂದ ನೀವುಗಳು, ಭಾರತೀಯ ನ್ಯಾಯ ಸಂಹಿತೆ ಕಲಂ.126(2) ಸಹ ಕಲಂ.149 ಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ , ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಚಾ ಸಾ 1 ರವರನ್ನು ತಡೆದು ನಿಲ್ಲಿಸಿ ನಂತರ ಚಾ ಸಾ 1 ರವರನ್ನು ಕಾರಿನಿಂದ ಹೊರಕ್ಕೆ ಎಳೆದುಕೊಂಡು ಚಾ ಸಾ 1 ರವರನ್ನು ಹಿಡಿದು ಎಳೆದಾಡಿ ಆರೋಪಿಗಳಾದ ನೀವುಗಳೆಲ್ಲರೂ ಅವರಿಗೆ ಕೈಗಳಿಂದ ಮುಖಕ್ಕೆ , ತಲೆಗೆ , ಮೈ ಕೈಗೆ ಬಲವಾಗಿ ಸ್ವಯಿಚ್ಚೆಯಿಂದ ಗುದ್ದಿ ನಂತರ ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ಚಾ ಸಾ 1 ರವರು ಧರಿಸಿದ್ದ ಷರ್ಟ್ ನ ಕುತ್ತಿಗೆ ಪಟ್ಟಿಯನ್ನು ಹಿಡಿದು ಎಳೆದಾಡಿ ಷರ್ಟ್ ನ್ನು ಹರಿದು ಹಾಕಿ ಕೈ ಬೆರಳುಗಳಿಂದ ಚಾ ಸಾ 1 ರವರ ಮುಖವನ್ನು ಪರಿಚಿ ಸಾಮಾನ್ಯ ಸ್ವರೂಪದ ಗಾಯಪಡಿಸಿ , ಆ ನಿಮಿತ್ತದಿಂದ ಮೇಲ್ಕಂಡ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹ ಕಲಂ.149 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ , ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಚಾ ಸಾ 1 ರವರನ್ನು ತಡೆದು ನಿಲ್ಲಿಸಿ ಅವರಿಗೆ ಕೈಗಳಿಂದ ಹೊಡೆದು ಹಾಗೂ ಕೈ ಬೆರಳುಗಳಿಂದ ಪರಿಚಿದ್ದಲ್ಲದೇ ಅವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ನಿಂದಿಸಿ , ಆ ನಿಮಿತ್ತದಿಂದ 2 ನೇ ಆರೋಪಿಯಾದ ನೀವು , ಭಾರತೀಯ ನ್ಯಾಯ ಸಂಹಿತೆ ಕಲಂ.504 ಸಹ ಕಲಂ.149 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

4. ನಾಲ್ಕನೆಯದಾಗಿ ಹಾಗೂ ಕಡೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ , ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಚಾ ಸಾ 1 ರವರನ್ನು ತಡೆದು ನಿಲ್ಲಿಸಿ ಅರೋಪಿಗಳಾದ ನೀವುಗಳೆಲ್ಲರೂ ಸೇರಿ ನೀನು ಪುನಃ ನಮ್ಮಗಳ ಕಣ್ಣಿಗೆ ಕಾಣಿಸಿಕೊಂಡರೆ ನಿನ್ನನ್ನು ಮುಗಿಸುತ್ತೇವೆ ಎಂದು ಚಾ ಸಾ 1 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿದ್ದು , ಆ ನಿಮಿತ್ತದಿಂದ ಆರೋಪಿತರಾದ ನೀವುಗಳು ,

ಭಾರತೀಯ ನ್ಯಾಯ ಸಂಹಿತೆ ಕಲಂ.351(2) ಸಹ ಕಲಂ.190 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

(ಮೇಲ್ಕಂಡ ಆರೋಪಿತರಾದ ನಿಮಗೆ ತಿಳಿದ ಕನ್ನಡ ಭಾಷೆಯಲ್ಲಿ ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಓದಿ ವಿವರಿಸಿ ಹೇಳಿದ್ದು , ನಂತರದಲ್ಲಿ ಆರೋಪಿತರಾದ ನೀವುಗಳ ನೀಡಿದ ಉತ್ತರವನ್ನು ನಾನೇ ಬರೆದುಕೊಂಡು ಸರಿಯಾಗಿದೆ ಎಂದು ಧೃಢಿಕರಿಸುತ್ತೇನೆ.)

ಸಕಲೇಶಪುರ
ದಿನಾಂಕ:10-07-2025

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಸಕಲೇಶಪುರ